ಶ್ರೀ ಎಚ್. ಎಂ. ಚೆನ್ನಬಸಪ್ಪ.—ಮನೆಗಳನ್ನು ಒಡಿಸಿಹಾಕಬೇಕಾದರೆ ಜೇಕಾದಷ್ಟು ಹಣ ಖರ್ಚಾಗುತ್ತದೆ. ಈಗ ಹಣದ ಅಭಾವ ಎಲ್ಲಿಯವರೆಗೆ ಇರುತ್ತದೋ ಆಲ್ಲಿಯವರೆಗೆ ಪ್ರಯಾರಿಟಿ ಕೆಲಸಗಳಿಗೆ ಮೊದಲ ಆದ್ಯತೆ ಕೊಟ್ಟು ನಂತರ ಈ ಕೆಲಸಗಳಿಗೆ ಹಣವನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಅಧ್ಯಕ್ಷರು.—ತಿಪಟೂರಿನ ಪ್ರಶ್ನೆಯನ್ನು ಶ್ರೀ ದೇವೇಗೌಡರ ಪರವಾಗಿ ಶ್ರೀ ಹನುಮೇಂಗೌಡರು ಕೇಳಬಹುದು.

MEDIUM AND MAJOR PROJECTS IN CAUVERY AND KRISHNA BASINS.

335. SRI K. H. HANUME GOWDA (Hassan) [on behalf of

SRI H. D. DEVEGOWDA (Holenarasipur)].

Will the Minister of State for Major Irrigation be pleased to state.—

(*a*) the number of projects (Medium and Major) sanctioned in Cauvery basin and Krishna basin and the estimated cost of each of of the same ;

(*b*) the progress achieved so far, the time required to complete the same (cost of estimate and progrers may kindly be given project-wise) ?

SRI H. N. NANJE GOWDA.—(Minister of State for Major Irrigation)

(*a*) *Vide* Statement appended.

(*b*) *Vide* Statement appended.

1	2	3	4	5
15	[illegible]kon Project	21.51	Completed	
16	Kolchi Weir	46.92	do	
17	Dharma Reservoir Project	132.94	do	
18	Hathikone Project	83.00	do	
19	Nagthana Project	17.76	do	
20	Harinala Project	88.41	The construction of dam is to be taken up.	1978
21	Chandrampalli Project	165.00	Almost completed.	1973-74
22	Chitwadgi Project	46.82	do	1973-74
23	Narihalla Project	190.00	The project is to be taken up for execution.	1975
	CAUVERY BASIN			
1	Kabini Reservoir	3500.00	Dam and Canal works in Progress	
2	Hemavathy Project	4735.00	Dam works are in progress. Canal works are taken up.	1976-77
3	Harangi Project	1800.00	Dam works in progress, Canal works taken up.	1976-77
4	Nugu Reservoir	311.14	Completed.	
5	Hebbahalla Project	43.60	do	
6	Mangala Reservoir Project	60.03	do	
7	Chikhole Project	94.00	do	
8	Suvarnavathy Project	248.00	Project nearing completion.	1972
9	Gundal Project	295.00	Dam works are in progress.	1974
10	Taraka Project	395.00	Dam works have been just taken up	1975
11	Manchanabele Project	237.37	Preliminary works are in progress.	1975
12	Sagaradoddakere Project	90.00	Works is to be taken up.	...
13	Votehole Project	258.00	Work is to be taken up.	...

STATEMENT (*Contd.*)

Sl. No.	Name of the Project	Estimated cost in lakhs	Present stage of work	Programmed date of completion
1	2	3	4	5
6	Upper Krishna Project stage-I	11667-00	The dam and canals are under construction.	1983-84
7	Rajolibunda Diversion Scheme	244.32	Completed except for some improvement works on canal and ayacut.	1974
8	Tunga Anicut	296.85	Completed except for some miscellaneous works such as village shifting, etc.	...
9	Ambligola Project	110.65	Completed.	
10	Hagaribommanahalli Project	293.00	Completed except for some minor works in the wasteweir. Water impounded in the reservoir.	March 1973
11	Jambadahalla Project	118.00	All the major works completed except Left Bank Canal. Water is being impounded in the reservoir.	
12	Kanakanala Project	97.00	Completed. Water is impounded in the Reservoir, and is being let out for irrigation.	
13	Ramanahalli Tank	40.50	Completed.	
14	Areshankar Tank	21.57	do	

ಶ್ರೀ ಕೆ.ಎಚ್. ಹನುಮೇಗೌಡ.—ಕಳೆದ ೩ ತಿಂಗಳುಗಳಿಂದ ಈ ಪ್ರಾಜೆಕ್ಟ್‌ಗಳ ಕೆಲಸ ನಿಶಾನವಾಗಿರುವುದಕ್ಕೆ ಕಾರಣವೇನು?

†ಶ್ರೀ ಎಚ್.ಎನ್. ನಂಜೇಗೌಡ.—ಅದು ಮಾಜಿ ಸದಸ್ಯರ ಅಭಿಪ್ರಾಯ.

ಶ್ರೀ ಕೆ.ಎಚ್. ಹನುಮೇಗೌಡ.—ಕಳೆದ ಮೂರು ತಿಂಗಳಲ್ಲಿ ತಿಮ್ಮು ಹಣ ಖರ್ಚಾಗಬಹುದಾಗಿತ್ತೋ ಅಷ್ಟು ಹಣ ಖರ್ಚಾಗದಿರುವುದಕ್ಕೆ ಕಾರಣವೇನು?

ಅಧ್ಯಕ್ಷರು.—ಅದು ಸಹ ನಿಮ್ಮ ಅಭಿಪ್ರಾಯವಾಗಿರುತ್ತದೆ.

ಶ್ರೀ ಕೆ.ಎಚ್. ಹನುಮೇಗೌಡ.—ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ಹೇಮಾವತಿ ಪ್ರಾಜೆಕ್ಟ್‌ಗೆ ಭೇಟಿ ಕೊಟ್ಟ ಸಂದರ್ಭದಲ್ಲಿ ಅಲ್ಲಿಯ ಕಂಟ್ರಾಕ್ಟರರು ತಮ್ಮ ಕ್ಲೈಮ್ಸು ಸೆಟಲ್ ಆಗಿಲ್ಲ ಎಂದು ತಿಳಿಸಿದ್ದು ನಿಜವೇ? ಅದು ನಿಜವಾಗಿದ್ದರೆ ಅವರ ಕ್ಲೈಮ್ಸ್‌ನ್ನು ಜಾಗ್ರತೆ ಸೆಟಲ್ ಮಾಡಿ ಕೆಲಸ ಜಾಗ್ರತೆಯಾಗುವಂತೆ ನೋಡಿಕೊಳ್ಳುತ್ತೀರಾ?

ಶ್ರೀ ಎಚ್.ಎನ್. ನಂಜೇಗೌಡ.—ಜಾಗ್ರತೆ ಕ್ಲೈಮ್ಸ್‌ನ್ನು ಸೆಟಲ್ ಮಾಡಿ ಕೆಲಸವಾಗುವಂತೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಾಪೂಗೌಡ ರಾಯಪ್ಪ.—ಅಪ್ಪರ್‌ಕೃಷ್ಣಾ ಪ್ರಾಜೆಕ್ಟ್ ೧೯೮೩—೮೪ರಲ್ಲಿ ಮುಂಕ್ತಾಯವಾಗುತ್ತದೆಂದು ಹೇಳಿದ್ದೀರಿ. ಈ ಯೋಜನೆಯ ಅಂದಾಜು ಮೆಚ್ಚ ೧೧೬ ಕೋಟಿ ರೂಪಾಯಿಗಳು ಈ ಯೋಜನೆಗೆ ಈ ವರ್ಷ ಕೇವಲ ಒಂದು ಕೋಟಿ ರೂಪಾಯಿ ಒದಗಿಸಿದ್ದೀರಿ. ಅಂದರೆ ಈ ಯೋಜನೆ ಮುಕ್ತಾಯವಾಗಲು ೧೧೬ ವರ್ಷ ಬೇಕಾಗುತ್ತದೆಯಲ್ಲವೇ?

ಶ್ರೀ ಎಚ್.ಎನ್. ನಂಜೇಗೌಡ.— ಮುಂದಿನ ವರ್ಷಗಳಲ್ಲಿ ಸ್ವಲ್ಪ ಹೆಚ್ಚು ಹಣ ಒದಗಿಸಬೇಕೆಂಬುದು ಸರ್ಕಾರದ ಅಭಿಪ್ರಾಯವಾಗಿದೆ. ನೀರಾವರಿಯಲ್ಲಿ ಹಿಂದುಳಿದ ಜಿಲ್ಲೆಗಳಿಗೆ ಹೆಚ್ಚು ಹಣವನ್ನು ಒದಗಿಸಬೇಕೆಂದು ಮೊನ್ನೆ ದೆಹಲಿಯಲ್ಲಿ ನಡೆದ ನೀರಾವರಿ ಮುಂತ್ರಿಗಳ ಸಮ್ಮೇಳನದಲ್ಲಿ ಒತ್ತಾಯ ಮಾಡಿದ್ದೇವೆ. ಆದ್ದರಿಂದ ಹೆಚ್ಚು ಹಣ ಒದಗಿಸುವುದು ಇಷ್ಟರಲ್ಲಿಯೇ ಸಾಧ್ಯವಾಗಬಹುದು ಎಂಬುದು ನಮ್ಮ ನಿರೀಕ್ಷೆಯಾಗಿದೆ.

ಶ್ರೀ ಎನ್.ಎಸ್. ಗುರುಸಿದ್ದಪ್ಪ.—ಮೊನ್ನೆ ತಾವು ಇನ್ಸ್‌ಪೆಕ್ಷನ್‌ಗೆ ಹೋದಾಗ ಹೇಮಾವತಿ ಯೋಜನೆಯಲ್ಲಿ ಕೆಲವು ಇರ್ರೆಗ್ಯುಲ್ಯಾರಿಟೀಸ್ ಆಗಿದ್ದು ಕಂಡುಬರಲಿಲ್ಲವೇ? ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಾ?

ಶ್ರೀ ಎಚ್.ಎಸ್. ನಂಜೇಗೌಡ.—ನಾನು ಇನ್ಸ್‌ಪೆಕ್ಷನ್‌ಗೆ ಹೋಗಿದ್ದು ನಿಜ. ಅಲ್ಲಿ ಕೆಲವು ಇರ್ರೆಗ್ಯುಲ್ಯಾರಿಟೀಸ್ ಕಂಡು ಬಂದಿದ್ದರಿಂದ ತನಿಖೆ ಮಾಡಬೇಕೆಂದು ಹೇಳಲಾಗಿದೆ. ಅದರ ವರದಿ ಬಂದ ನಂತರ ಮುಂದಿನ ಕಾರ್ಯಕ್ರಮ ಕೈಗೊಳ್ಳುತ್ತೇವೆ.

ಶ್ರೀ ಸಿ.ಎಫ್. ಪಾಟೀಲ್.—ಅಪ್ಪರ್‌ಕೃಷ್ಣಾ ಪ್ರಾಜೆಕ್ಟ್‌ಗೆ ಹರ್ಲ್ಡ್ ಬ್ಯಾಂಕಿನಿಂದ ಸಾಲ ಕೇಳಲು ಅರ್ಜಿ ಹಾಕಿದ್ದು ನಿಜವೇ? ಅಲ್ಲಿಂದ ಏನಾದರೂ ಸಾಲ ಸಿಗುತ್ತದೆಯೇ?

ಶ್ರೀ ಎಚ್.ಎನ್. ನಂಜೇಗೌಡ.—ಆ ವಿವರಗಳು ಇಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮುಂಚನಬೆಲೆ ಪ್ರಾಜೆಕ್ಟ್ ಕೆಲಸ ೧೯೭೫ರಲ್ಲಿ ಮುಗಿಸುತ್ತೇವೆಂದು ಹೇಳಿದ್ದೀರಿ. ಈ ಸಾಲಿನಲ್ಲಿ ಕೇವಲ ಆರೂವರೆ ಲಕ್ಷ ರೂಪಾಯಿಗಳನ್ನು ಒದಗಿಸಿದ್ದೀರಿ. ಇದರಲ್ಲಿ ಸಿಬ್ಬಂದಿಗಾಗಿಯೇ ೩—೪ ಲಕ್ಷ ರೂಪಾಯಿಗಳು ಖರ್ಚಾಗುತ್ತದೆ. ಕೆಲಸದ ಭಾಗಕ್ಕೆ ಹೆಚ್ಚು ಹಣ ಉಳಿಯುವುದಿಲ್ಲವಾದ್ದರಿಂದ ಈ ಯೋಜನೆಯನ್ನು ೧೯೭೫ರಲ್ಲಿ ಯಾವ ರೀತಿ ಮುಗಿಸುತ್ತೀರಾ?

ಶ್ರೀ ಎಚ್.ಎನ್. ನಂಜೇಗೌಡ.—ಮೊದಲು ೧೯೭೫ರಲ್ಲಿ ಮುಗಿಸಬೇಕೆಂದು ಉದ್ದೇಶ ಇಟ್ಟುಕೊಂಡಿದ್ದು ನಿಜ. ಆದರೆ ಫೌಂಡೇಷನ್ ತೆಗೆಯುವಾಗ ರಾಕ್ ಸರಿಯಾಗಿ ಸಿಕ್ಕಲಿಲ್ಲವಾದ್ದರಿಂದ ಅದನ್ನು ಸರಿಪಡಿಸಬೇಕು ಎನ್ನುವ ವಿಷಯಕ್ಕೆ ಗಮನ ಕೊಡುತ್ತಿದ್ದೇವೆ. ಅದು ಸರಿಯಾದ ನಂತರ ಆತುರವಾಗಿ ಕೆಲಸ ಮುಗಿಸಬೇಕೆಂದು ಸರ್ಕಾರದ ಅಪೇಕ್ಷೆಯಾಗಿದೆ.

ಶ್ರೀ ಎಂ.ಎಸ್. ಕೃಷ್ಣನ್.—ಸುಮಾರು ೪೭ ಕೋಟಿ ರೂಪಾಯಿಗಳ ವೆಚ್ಚದ ಹೇಮಾವತಿ ಯೋಜನೆಯನ್ನು ೧೯೭೬—೭೭ನಲ್ಲಿ ಮುಗಿಸುತ್ತೇವೆಂದು ಹೇಳಿದ್ದೀರಿ. ನೆನ್ನೆ ದಿವಸ ವಿರೋಧ ಪಕ್ಷದ ಮಂತ್ರಿಗಳು ಅದನ್ನು ಇನ್ಸ್‌ಪೆಕ್ಷನ್ ಮಾಡಿಕೊಂಡು ಬಂದಿದ್ದಾರೆ. ಅಲ್ಲಿ ಅಕ್ವಡಕ್ಟ್‌ನಲ್ಲಿ ಇರೆಗ್ಯುಲ್ಯಾರಿಟೀಸ್ ಇದೆ, ಟೆಕ್ನಿಕಲ್ ಡಿಫೆಕ್ಟ್ ಇದೆ, ಟೆಕ್ನಿಕಲ್ ಕಾನ್‌ಟ್ರವರ್ಸಿ ಇವೆ ಎಂತೆಂದು ಅವರಿಗೆ ಕಂಡುಬಂದಿದ್ದು ನಿಜವೇ?

ಶ್ರೀ ಎಚ್.ಎನ್.ನಂಜೇಗೌಡ.—ಎರಡು ಉದ್ದೇಶಗಳಿಗಾಗಿ ಒಂದು ವಾರ ಅಥವಾ ಎರಡು ವಾಷಗಳವರೆಗೆ ಕೆಲಸ ನಿಷ್ಠಾನ ಮಾಡಬೇಕೆಂದು ಹೇಳಿದ್ದೇವೆ. ಒಂದನೆಯದು ಹೆಚ್ಚು ಭಾಗಗಳಿಗೆ ನೀರು ಕೊಡಲು ಅಕ್ವಡಕ್ಟ್ ಇರಬೇಕೇ ಅಥವಾ ಸೈಫನ್ ಅರೇಂಜ್‌ಮೆಂಟ್ ಇರಬೇಕೇ ಎಂಬುದನ್ನು ತೀರ್ಮಾನ ಮಾಡಲು ಟೆಕ್ನಿಕಲ್ ಎಕ್ಸ್‌ಪರ್ಟ್ಸ್‌ಗೆ ಬಿಟ್ಟಿದ್ದೇವೆ. ಎರಡನೆಯದು ಈ ಯೋಜನೆಯಿಂದ ನಾಗಮಂಗಲ, ತುರುವೇಕೆರೆ ಮುಂತಾದ ಭಾಗಗಳಿಗೆ ನೀರನ್ನು ಕೊಡುವುದಕ್ಕೆ ಸಾಧ್ಯತೆ ಇದೆಯೇ ಎಂಬುದನ್ನು ಯೋಚನೆ ಮಾಡುತ್ತಿದ್ದೇವೆ. ಈ ಕಾರಣದಿಂದ ಎರಡು ವಾರ ಕೆಲಸ ನಿಧಾನ ಮಾಡಬೇಕೆಂದು ಹೇಳಿದ್ದೇವೆ.

ಶ್ರೀ ಜಾಫಗೌಡ ರಾಯಪ್ಪ.—ಅಪ್ಪರ್‌ಕೃಷ್ಣ ಪ್ರಾಜೆಕ್ಟಿನ ಮೊದಲನೆಯ ಹಂತ, ಎರಡನೆಯ ಹಂತಗಳ ಕೆಲಸ ಮುಂಗಿಯದೇ ಇರುವಾಗ, ಮೂರನೇ ಹಂತದ ಕೆಲಸ ಕೈಕೊಳ್ಳಬೇಕೆಂದು ಅದೇಶ ಕೊಟ್ಟಿರುವುದು ಗೊತ್ತಾಗಿದೆ. ಅದು ನಿಜವೇ?

ಶ್ರೀ ಎಚ್.ಎನ್. ನಂಜೇಗೌಡ.—ಅದು ಮಾನ್ಯ ಸದಸ್ಯರಿಗೆ ಗೊತ್ತಿರುವ ವಿಷಯ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮುಂಚನಬೆಲೆ ಪ್ರಾಜೆಕ್ಟ್ ಬಗ್ಗೆ ಒಂದು ಡಿವಿಜನ್ ರಾಮನಗರದಲ್ಲಿದೆ. ಆ ಡಿವಿಜನನ್ನು ರದ್ದು ಮಾಡಬೇಕೆಂದಿರುವುದು ನಿಜವೇ?

ಶ್ರೀ ಎಚ್.ಎನ್. ನಂಜೇಗೌಡ.—ಆ ಡಿವಿಜನ್‌ನಲ್ಲಿ ಇದುವರೆಗೆ ಎಕ್ಸಿಕ್ಯುಟಿವ್ ಇಂಜಿನಿಯರ್ ಇರಲಿಲ್ಲ. ಆ ಕಾರಣದಿಂದ ಅವರಿಗೆ ಅಂತಕ ಇದ್ದ ಹಾಗೆ ಕಾಣುತ್ತಿದೆ. ಆದಷ್ಟು ಜಾಗ್ರತೆ ಅಲ್ಲಿಗೆ ಎಕ್ಸಿಕ್ಯುಟಿವ್ ಇಂಜಿನಿಯರ್ ಅವರನ್ನು ನೇಮಕ ಮಾಡಿ ಕೆಲಸ ಜಾಗ್ರತೆ ಮುಂಗಿಸಬೇಕೆಂಬುದು ಸರ್ಕಾರದ ಅಭಿಪ್ರಾಯವಾಗಿದೆ.

ಶ್ರೀ ಎಚ್.ಬಿ. ಕೆಂಚೇಗೌಡ.—ಹೇಮಾವತಿಯಲ್ಲಿ ಕೆಲಸ ಕುಂಠಿತವಾಗಲು ಕಾರಣ ಹಿಂದಿನ ಸರ್ಕಾರದಲ್ಲಿ ಕೆಲವು ಗೊಂದಲಗಳಾದದ್ದು ಎನ್ನುವುದು ನಿಜವೇ?

ಶ್ರೀ ಎಚ್.ಎನ್. ನಂಜೇಗೌಡ.—ಹಿಂದಿನ ಸರ್ಕಾರ ಈ ಸರ್ಕಾರ ಎಂದು ಹೇಳುವುದಕ್ಕೆ ಬರುವುದಿಲ್ಲ. ಕೆಲವು ಕ್ರಮಬದ್ಧವಲ್ಲದ ಕೆಲಸಗಳು ಡ್ಯಾಂ ಬಗ್ಗೆ ಆಗಿ ಕೆಲಸ ಸ್ಥಗಿತವಾಗಿತ್ತು. ಒಪ್ಪಂದದ ಪ್ರಕಾರ ಕಂಟ್ರಾಕ್ಟದಾರರು ಕೆಲಸ ಮಾಡದೇ ಇದ್ದುದರಿಂದ ಮತ್ತು ಒಪ್ಪಂದವಿಲ್ಲದೆ ಕೆಲಸ ಮಾಡಿದ್ದರಿಂದ, ಅದೆಲ್ಲ ಪಮ್ಸ್ ಕನಿಟ್ ಮಾಡಬೇಕೆಂದು ಎಂ.ಪಿ.ಸಿ.ಬಿ. ಅವರಿಗೆ ತಿಳಿಸಿದ್ದೇವೆ. ಈಗ ಅವರು ಅನುಮತಿ ಕೊಡಬೇಕಾಗಿದೆ.

ಶ್ರೀ ಎಚ್.ಬಿ. ಕೆಂಚೇಗೌಡ.—ಹೇಮಾವತಿ ಯೋಜನೆಯಿಂದ ನೀರನ್ನು ಸಾಲಿಗ್ರಾಮ ಹಳ್ಳಿ ಮೈಸೂರು, ಎಲ್ಲೆ ಭಾಗಗಳಿಗೆ ಒದಗಿಸುವ ಕೆಲಸ ಯಾವ ಸ್ಟೇಜ್‌ನಲ್ಲಿದೆ?

ಶ್ರೀ ಎಚ್.ಎನ್. ನಂಜೇಗೌಡ.—ಸ್ಲೂಯಿಸ್ ಗೇಟ್ ದೊಡ್ಡದು ಮಾಡಿಕೊಂಡು ಹೈಲೆವಲ್ ಚಾನಲ್ ಮೂಲಕ ಆ ಭಾಗಗಳಿಗೂ ನೀರನ್ನು ಎರಡನೇ ಹಂತದಲ್ಲಿ ಒದಗಿಸಬೇಕೆಂಬುದು ಸರ್ಕಾರದ ಪರ್ಯಾಲೋಚನೆಯಲ್ಲಿದೆ.

ಶ್ರೀ ಕೆ.ಎಚ್. ಹನುಮೇಗೌಡ.—ಹೇಮಾವತಿ ಡ್ಯಾಂನ ಎತ್ತರವನ್ನು ಜಾಸ್ತಿ ಮಾಡಬೇಕೆಂದಿರುವುದರಿಂದ ಹಾಸನ ತಾಲ್ಲೂಕಿನ ಸುಮಾರು ೩ ಸಾವಿರ ಎಕರೆ ಪ್ರದೇಶ ಮುಳುಗಡೆಯಾಗುತ್ತದೆ. ಈ ಕಾರಣದಿಂದ ಕ್ಷಾಮಕ್ಕೆ ತುತ್ತಾ ಗಿರುವ ಹಾಸನ ಜಿಲ್ಲೆಯ ಪೂರ್ವ ಭಾಗಕ್ಕೂ ಹೈ-ಪವರ್ ಪಂಪ್‌ಸೆಟ್ಟು ಹಾಕಿ ಈ ಯೋಜನೆಯ ನೀರನ್ನು ಒದಗಿಸುವುದಕ್ಕೆ ಆಲೋಚನೆ ಮಾಡುತ್ತೀರಾ?

ಶ್ರೀ ಎಚ್.ಎನ್ ನಂಜೇಗೌಡ.—ಸಧ್ಯಕ್ಕೆ ಆ ಆಲೋಚನೆ ಇಲ್ಲ.